# ಗಜ಼ಲ್



ವೆಂಕಟ್ರಮಣ ಭಟ್

ನಿನ್ನ ದೇಹ ಸೌಂದರ್ಯಕ್ಕೆ ದೇವರುಗಳು ಮರುಳಾಗುತ್ತಾರೆ
ದೇವತೆಗಳನ್ನೂ ಮೀರಿದ ಹೊಳಪಿಗೆ ರಾಕ್ಷಸರು ಮಂಡಿಯೂರುತ್ತಾರೆ

ಆಫೀಮಿನಂತಿರುವ ಕಣ್ಣ ಕೊಳದಲ್ಲಿ ಮುಳುಗಿ ಹೋದರು
ವ್ಯಸನಿಗಳು ಸದಾ ಅಮಲಿನಲ್ಲಿರಲು ಬಯಸುತ್ತಾರೆ

ನೀನು ಸಿಗದಿದ್ದರೂ ಅಮರಪ್ರೇಮಿಗಳಾಗಿ ಸಾಯರು
ಸ್ಮರಣೆಯಲ್ಲೇ ಜೀವಂತ ಉಳಿಯಲು ಹೋರಾಡುತ್ತಾರೆ

ಬೇಡವೆಂದರೂ ದೂರಿರದೆ ವಿರಹದಗ್ನಿಗೆ ದಹಿಸಿಹೋದರು
ಬಿಡದೆ ಬೆಕ್ಕಿನಂತೆ ಬಂದು ಕಾಲಬುಡದಲ್ಲೇ ನಡೆಯುತ್ತಾರೆ

ನೀನು ಹಾಕಿದ ಸೀತಾ ರೇಖೆಯೆ ಎಂದೂ ದಾಟದವರು
'ಕೃಷ್ಣ'ನಂತೆ ಕೊಳಲು ಹಿಡಿದು ನಿನ್ನ ಹತ್ತಿರ ಸುಳಿಯುತ್ತಾರೆ

• **ಕೃಷ್ಣ ದೇವಾಂಗಮಠ**